ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	669 (725)
ವಿಧಾನ ಪರಿಷತ್ತಿನ ಸದಸ್ಯರ ಹೆಸರು	:	ಶ್ರೀ ಸುನೀಲ್ ಗೌಡ ಬಸನಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	17-09-2021
ಉತ್ತರಿಸುವವರು	:	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

<table>
<tr><th>ಕ್ರ.ಸಂ.</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>(ಅ)</td><td>ಗ್ರಾಮ ಪಂಚಾಯತ್ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ ಮತ್ತು ಸದಸ್ಯರಿಗೆ ಈ ಹಿಂದೆ ಯಾವಾಗ ಗೌರವಧನವನ್ನು ಪರಿಷ್ಕರಿಸಲಾಗಿತ್ತು

ಮತ್ತು

ಎಷ್ಟು ವರ್ಷಗಳಿಗೊಮ್ಮೆ ಪರಿಷ್ಕರಿಸಲಾಗುವುದು; (ತಿಳಿಸುವುದು)</td><td>ಈ ಕೆಳಕಂಡ ಸರ್ಕಾರಿ ಆದೇಶಗಳನ್ವಯ, ಗ್ರಾಮ ಪಂಚಾಯತಿ ಚುನಾಯಿತ ಸದಸ್ಯರುಗಳ ಗೌರವಧನವನ್ನು ಪರಿಷ್ಕರಿಸಲಾಗಿದೆ.
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 123 ಜಿಪಸ 2011, ದಿನಾಂಕ: 25.05.2011.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 75 ಜಿಪಸ 2014, ದಿನಾಂಕ: 06.12.2014.
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 116 ಜಿಪಸ 2017, ದಿನಾಂಕ: 03.05.2017.
(ರೂ.ಗಳಲ್ಲಿ)<table><tr><th></th><th>2010-11</th><th>2014-15</th><th>2017-18</th></tr><tr><td>ಅಧ್ಯಕ್ಷರು</td><td>500</td><td>1000</td><td>3000</td></tr><tr><td>ಉಪಾಧ್ಯಕ್ಷರು</td><td>300</td><td>600</td><td>2000</td></tr><tr><td>ಸದಸ್ಯರು</td><td>250</td><td>500</td><td>1000</td></tr></table>ಗೌರವಧನವನ್ನು ಪರಿಷ್ಕರಣೆ ಮಾಡಲು ನಿರ್ದಿಷ್ಟ ಕಾಲಮಿತಿಯನ್ನು ನಿಗದಿಪಡಿಸಿರುವುದಿಲ್ಲ.</td></tr>
<tr><td>(ಆ)</td><td>ಸದರಿ ಸದಸ್ಯರಿಗೆ ಪ್ರಸ್ತುತ ನೀಡುತ್ತಿರುವ ಗೌರವಧನವು ತುಂಬಾ ಕಡಿಮೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td rowspan="3">ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿದೆ.</td></tr>
<tr><td>(ಇ)</td><td>ಸದರಿ ಸದಸ್ಯರಿಗೆ ಗೌರವಧನವನ್ನು ಹೆಚ್ಚು ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆಯೇ;</td></tr>
<tr><td>(ಈ)</td><td>ಗ್ರಾಮ ಪಂಚಾಯತ್ ಸದಸ್ಯರಿಗೆ ಗೌರವಧನವನ್ನು ಪರಿಷ್ಕರಿಸಿ ಸುಮಾರು ಐದು (5) ವರ್ಷಗಳಾಗಿವೆ, ಪ್ರಸ್ತುತ ಹೆಚ್ಚುತ್ತಿರುವ ಬೆಲೆ ಏರಿಕೆಯಂತಹ ಸನ್ನಿವೇಶದಲ್ಲಿ ಅಧ್ಯಕ್ಷರಿಗೆ ರೂ. 5000/-, ಉಪಾಧ್ಯಕ್ಷರಿಗೆ ರೂ. 4000/- ಮತ್ತು ಸದಸ್ಯರಿಗೆ ರೂ.3000/- ರಂತೆ ಮಾಸಿಕ ಗೌರವಧನವನ್ನು ಹೆಚ್ಚಿಸುವ ಕುರಿತಂತೆ ಸರ್ಕಾರದ ಸ್ಪಷ್ಟ ನಿಲುವೇನು; (ಮಾಹಿತಿ ನೀಡುವುದು)</td></tr>
</table>

(ಉ)	ಗ್ರಾಮ ಪಂಚಾಯತ್ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರಿಗೆ ಪಿಂಚಣಿ **(Pension)** ನೀಡುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆಯೇ; ಸದರಿ ಸದಸ್ಯರಿಗೆ ಪಿಂಚಣಿಯನ್ನು ನೀಡುವ ಬಗ್ಗೆ ಸರ್ಕಾರದ ನಿಲುವೇನು;	ಇಲ್ಲ ತ್ರಿಸ್ತರ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಪಿಂಚಣಿ ನೀಡುವ ಕುರಿತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರಲ್ಲಿ ಅವಕಾಶವಿರುವುದಿಲ್ಲ.
(ಊ)	ಗ್ರಾಮ ಪಂಚಾಯತ್ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರಿಗೆ ಉಚಿತ ಬಸ್ ಪಾಸ್ ನೀಡುವ ಕುರಿತಂತೆ ಸರ್ಕಾರದ ಸ್ಪಷ್ಟ ನಿಲುವೇನು? (ಮಾಹಿತಿ ನೀಡುವುದು)	ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳು ಗ್ರಾಮ ಪಂಚಾಯತಿ ಕೆಲಸಗಳ ನಿಮಿತ್ತ ಗ್ರಾಮ ಪಂಚಾಯತಿ ಪರಿಮಿತಿಗಳಾಚೆ ಮಾಡಿದ ಪ್ರಯಾಣಗಳಿಗಾಗಿ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರುಗಳ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ) ನಿಯಮಗಳು, **1994** ರನ್ವಯ ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆಗಳನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಸಂಖ್ಯೆ: ಗ್ರಾಅಪಂರಾ 383 ಜಿಪಸ 2021

(ಕೆ.ಎಸ್. ಈಶ್ವರಪ್ಪ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕರ್ನಾಟಕ ಸರ್ಕಾರ

ಸಂ. ಗ್ರಾಅಪ: 13 ಜಿಪಸ 2011

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು ದಿನಾಂಕ:26-04-2011

ಸುತ್ತೋಲೆ

ವಿಷಯ: ಗ್ರಾಮ ಪಂಚಾಯತಿ ಸದಸ್ಯರುಗಳ ಉಪವೇಶನ ಶುಲ್ಕ ಮತ್ತು ಗೌರವಧನ ಪಾವತಿಸುವ ಬಗ್ಗೆ

ಉಲ್ಲೇಖ: 1. ಕನ್ನಡ ದಿನ ಪತ್ರಿಕೆ ಪ್ರಕಟಣೆ ದಿನಾಂಕ 25.03.2011.
2. ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 155 ಜಿಪಸ 2//003, ದಿನಾಂಕ 01.80.2003
3. ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 214 ಜಿಪಸ 2008, ದಿನಾಂಕ 22.8.2008

ಉಲೇಕ: 1ರಲ್ಲಿ ಓದಲಾದ ಪತ್ರಿಕೆ ಪ್ರಕಟಣೆಯ ಶ್ರೀ ರ್ಷಿಕೆ ರಾಜ್ಯದ ಗ್ರಾಮ ಪಂಚಾಯತ್ ಸದಸ್ಯರಿಗೆ ಸಭಾ ಭತ್ಯೆ ಕಡಿತ ; ರಲ್ಲಿ ಪ್ರಕಟಗೊಂಡ ಮಾಹಿತಿಯನ್ನು ಸರ್ಕಾರ ಗಮನಿಸಿದೆ. ಈ ಹಿನ್ನೆಲೆಯಲ್ಲಿ

ಉಲ್ಲೇಖ (2)ರಲ್ಲಿನ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:155 ಜಿಪಸ:2003 ದಿ:1-8-2003 ರನ್ವಯ ರಾಜ್ಯದ ಜಿಲ್ಲಾ ಪಂಚಾಯತ್ ಅಧ್ಯಕ್ಷ/ಉಪಾಧ್ಯಕ್ಷ ಹಾಗೂ ಸದಸ್ಯರುಗಳ ಗೌರವಧನವನ್ನು ಹಾಗೂ ಜಿಲ್ಲಾ ಪಂಚಾಯಿತ್ ಮತ್ತು ಗ್ರಾಮ ಪಂಚಾಯತ್ಗಳ ಸದಸ್ಯರಿಗೆ ಉಪವೇಶನ ಶುಲ್ಕವನ್ನು ಈ ಕೆಳಕಂಡ ದರಗಳಲ್ಲಿ ನೀಡಲಾಗಿದೆ. ಈ ವೆಚ್ಚವನ್ನು ಗ್ರಾ.ಪಂ./ತಾ.ಪಂ/ಜಿ.ಪಂ.ಗಳು ತಮ್ಮದೇ ಆದ ಸಂಪನ್ಮೂಲಗಳಿಂದ ಭರಿಸುವಂತೆ ಆದೇಶಿಸಲಾಗಿದೆ.

ಕ್ರಮ ಸಂಖ್ಯೆ	ಭತ್ಯೆಗಳು/ಶುಲ್ಕಗಳು	ಗ್ರಾಮ ಪಂಚಾಯತಿ	ತಾಲ್ಲೂಕು ಪಂಚಾಯತಿ	ಜಿಲ್ಲಾ ಪಂಚಾಯತಿ
1	ಉಪವೇಶನ ಶುಲ್ಕ	100.00	150.00	200.00
2	ಗೌರವಧನ			
	ಅಧ್ಯಕ್ಷರು	500.00	2000.00	2750.00
	ಉಪಾಧ್ಯಕ್ಷರು	300.00	1300.00	2050.00
	ಸದಸ್ಯರು	—	700.00	1200.00

ಉಲ್ಲೇಖ (3) ರಲ್ಲಿನ ಸರ್ಕಾರದ ಆದೇಶದಲ್ಲಿ ರಾಜ್ಯದ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತಿ ಸದಸ್ಯರುಗಳಿಗೆ ಮಾಸಿಕ ಗೌರವಧನವನ್ನು ಕೆಳಕಂಡಂತೆ ನೀಡಲು ಆದೇಶಿಸಲಾಗಿರುತ್ತದೆ.

ಹುದ್ದೆಗಳು	ಗ್ರಾಮ ಪಂಚಾಯತಿ	ತಾಲ್ಲೂಕು ಪಂಚಾಯತಿ	ಜಿಲ್ಲಾ ಪಂಚಾಯತಿ
ಅಧ್ಯಕ್ಷರು	500-00	2000-00	2750-00
ಉಪಾಧ್ಯಕ್ಷರು	300-00	1300-00	2050-00
ಸದಸ್ಯರು	250-00	700-00	1200-00

ಮೇಲೆ ತಿಳಿಸಿರುವಂತೆ ಉಲ್ಲೇಖ (2) ಮತ್ತು (3) ಸರ್ಕಾರದ ಆದೇಶಗಳಲ್ಲಿ ಆದೇಶಿಸಿರುವ ಉಪವೇಶನ ಶುಲ್ಕ ಮತ್ತು ಮಾಸಿಕ ಗೌರವಧನವನ್ನು ಎಲ್ಲಾ ಚುನಾಯಿತ ಪಂಚಾಯತ್ ಸದಸ್ಯರುಗಳಿಗೆ ಪಾವತಿಸಲು ಸರ್ಕಾರವು ಈಗಾಗಲೇ ಆದೇಶವನ್ನು ಹೊರಡಿಸಲಾಗಿರುತ್ತದೆ. ಆದರೆ; ರಾಜ್ಯದ ಗ್ರಾಮ ಪಂಚಾಯತಿ ಸದಸ್ಯರುಗಳಿಗೆ ಸಭಾ ಭತ್ಯೆ ಕಡಿತಗೊಂಡಿರುವುದಾಗಿ ದಿನಾಂಕ 25/03/2011 ರಂದು ಕನ್ನಡ ಪ್ರಭ ಪತ್ರಿಕಾ ವರದಿಯೊಂದು ಪ್ರಕಟವಾಗಿರುತ್ತದೆ. ವರದಿಯಲ್ಲಿ ಕೆಲವೊಂದು ಗ್ರಾಮ ಪಂಚಾಯತಿಗಳು ಸದಸ್ಯರಿಗೆ ಗೌರವಧನವನ್ನು ಮಾತ್ರ ನೀಡಿ, ಸಭಾ ಭತ್ಯೆಯನ್ನು ನೀಡುತ್ತಿಲ್ಲವೆಂದು ಪ್ರಕಟಿಸಲಾಗಿದೆ. ಈ ಸಂಬಂಧವಾಗಿ ಸಂಬಂಧಿಸಿದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳು ಸರಿಯಾದ ಸ್ಪಷ್ಟೀಕರಣ ನೀಡುತ್ತಿಲ್ಲವೆಂದು ಸಹ ತಿಳಿಸಲಾಗಿರುತ್ತದೆ.

ಈ ಸಂಬಂಧವಾಗಿ ಉಲ್ಲೇಖ (2) ಮತ್ತು (3) ರಲ್ಲಿನ ಸರ್ಕಾರದ ಆದೇಶಗಳಲ್ಲಿ ನಿಗದಿಪಡಿಸಲಾದಂತೆ ಉಪವೇಶನ ಶುಲ್ಕ (ಸಭಾ ಭತ್ಯೆ) ಹಾಗೂ ಮಾಸಿಕ ಗೌರವಧನವನ್ನು ಕಡ್ಡಾಯವಾಗಿ ಪಾವತಿಸುವಂತೆ ಸೂಚಿಸಿದೆ.

(ಸ್ವರ್ಣಲತ ಎಂ ಭಂಡಾರೆ)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,

ಇವರಿಗೆ,
ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು
ಎಲ್ಲಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಣಾಧಿಕಾರಿಗಳು
ಎಲ್ಲಾ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು/ಕಾರ್ಯದರ್ಶಿಗಳು

ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಿಗೆ ನೀಡುತ್ತಿರುವ ಮಾಸಿಕ ಗೌರವ ಧನವನ್ನು ಇಮ್ಮಡಿಗೊಳಿಸುವುದು.

ಓದಲಾಗಿದೆ:

1. ಸರ್ಕಾರದ ಆದೇಶಸಂ. ಗ್ರಾಅಪ 214 ಜಿಪಸ 2008, ದಿನಾಂಕ 22.08.2008.
2. ಸರ್ಕಾರದ ಆದೇಶ ಸಂ. ಗ್ರಾಅಪ 123 ಜಿಪಸ 2011, ದಿನಾಂಕ 25.05.2011.

ಪ್ರಸ್ತಾವನೆ:

ಮೇಲೆ ಓದಲಾದ (1) ಮತ್ತು (2)ರ ಸರ್ಕಾರದ ಆದೇಶಗಳಲ್ಲಿ ರಾಜ್ಯದ ಗ್ರಾಮ ಪಂಚಾಯತಿ, ಜಿಲ್ಲಾ, ತಾಲ್ಲೂಕು ಹಾಗೂ ಚುನಾಯಿತ ಪ್ರತಿನಿಧಿಗಳಿಗೆ ಈ ಕೆಳಕಂಡಂತೆ ಮಾಸಿಕ ಗೌರವ ಧನ ಮಂಜೂರು ಮಾಡಲಾಗಿದೆ.

(ರೂ.ಗಳಲ್ಲಿ)

	ಗ್ರಾಮ ಪಂಚಾಯತಿ	ತಾಲ್ಲೂಕು ಪಂಚಾಯತಿ	ಜಿಲ್ಲಾ ಪಂಚಾಯತಿ
ಅಧ್ಯಕ್ಷರು	500	2250	3000
ಉಪಾಧ್ಯಕ್ಷರು	300	1500	2250
ಸದಸ್ಯರು	250	750	1500

2014–15ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಿಗೆ ನೀಡುತ್ತಿರುವ ಮಾಸಿಕ ಗೌರವ ಧನವನ್ನು ಇಮ್ಮಡಿಗೊಳಿಸಲಾಗುವುದೆಂದು ಘೋಷಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ, ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿಗಳ ಅಧ್ಯಕ್ಷರು/ಉಪಾಧ್ಯಕ್ಷರು ಮತ್ತು ಸದಸ್ಯರುಗಳ ಗೌರವ ಧನವನ್ನು ಹೆಚ್ಚಿಸಲು ಸರ್ಕಾರವು ನಿರ್ಣಯಿಸಿದೆ.

ಜಿಲ್ಲಾ ಪಂಚಾಯತ್ ಕಾರ್ಯಾಲಯ, ಮೈಸೂರು
-8 DEC 2014

ಅದರಂತೆ, ಈ ಕೆಳಕಂಡ ಆದೇಶ.

15851

ಸರ್ಕಾರದ ಆದೇಶ ಸಂ. ಗ್ರಾಅಪ 75 ಜಿಪಸ 2014, ಬೆಂಗಳೂರು, ದಿನಾಂಕ 06.12.2014

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ 2014–15ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ರಾಜ್ಯದ ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಿಗೆ ಪ್ರಸ್ತುತ ನೀಡುತ್ತಿರುವ ಮಾಸಿಕ ಗೌರವ ಧನವನ್ನು ದಿನಾಂಕ 01.04.2014 ರಿಂದ ಅನ್ವಯಿಸುವಂತೆ ಇಮ್ಮಡಿಗೊಳಿಸಲು ಸರ್ಕಾರವು ಈ ಮೂಲಕ ಮಂಜೂರಾತಿ ನೀಡಿ ಆದೇಶಿಸಿದೆ. ಪರಿಷ್ಕೃತ ಗೌರವ ಧನ ಕೆಳಕಂಡಂತಿದೆ:

Attested

	ಗ್ರಾಮ ಪಂಚಾಯತಿ	ತಾಲ್ಲೂಕು ಪಂಚಾಯತಿ	ಜಿಲ್ಲಾ ಪಂಚಾಯತಿ
ಅಧ್ಯಕ್ಷರು	1000	4500	6000
ಉಪಾಧ್ಯಕ್ಷರು	600	3000	4500
ಸದಸ್ಯರು	500	1500	3000

Accounts Officer,
Zilla Panchayat, Mysore

ಮೇಲಿನ ವೆಚ್ಚವನ್ನು ಜಿಲ್ಲಾ ಪಂಚಾಯತಿಗಳು ಲೆಕ್ಕಶೀರ್ಷಿಕೆ 2515-00-101-0-28 (ಯೋಜನೇತರ), ತಾಲ್ಲೂಕು ಪಂಚಾಯತಿಗಳು ಲೆಕ್ಕಶೀರ್ಷಿಕೆ 2515-00-102-0-61 (ಯೋಜನೇತರ) ರಡಿ ಭರಿಸತಕ್ಕದ್ದು, ಗ್ರಾಮ ಪಂಚಾಯತಿಗಳ ಲೆಕ್ಕಶೀರ್ಷಿಕೆ ಪ್ರತ್ಯೇಕವಾಗಿ ತಿಳಿಸಲಾಗುವುದು.

ಈ ಆದೇಶವು ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ನಿಯಮ 17ರ ಉಪ ನಿಯಮ (2)ರ ಪರಂತುಕದ ವ್ಯಾಪ್ತಿಯಲ್ಲಿ ಬರಲಿದ್ದು, ಅದರಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎಸ್.ಎಂ.ಜುಲ್ಫಿಖಾರ್‌ಉಲ್ಲಾ)
ನಿರ್ದೇಶಕರು (ಪಂ.ರಾಜ್-2) ಮತ್ತು ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾ.ಅ&ಪಂ.ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
4. ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
5. ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.
6. ಸಚಿವ ಸಂಪುಟ ಶಾಖೆ, ವಿಧಾನ ಸೌಧ (ವಿಷಯ ಸಂ:ಸಿ:682/2014, ದಿನಾಂಕ 28.11.2014).
7. ಆರ್ಥಿಕ ಇಲಾಖೆ (ವೆಚ್ಚ-6), ವಿಧಾನ ಸೌಧ.
8. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ&ಪಂ.ರಾಜ್ ಇಲಾಖೆ.
9. ಕರ್ನಾಟಕ ವಿಕಾಸ/ವೆಬ್‌ಸೈಟ್.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿ:

1. ಮಾನ್ಯ ಗ್ರಾ.ಅ&ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು (ಪಂ.ರಾಜ್), ಗ್ರಾ.ಅ&ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಚುನಾಯಿತ ಪ್ರತಿನಿಧಿಗಳಿಗೆ ಗೌರವಧನವನ್ನು ಹೆಚ್ಚಿಸುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 75 ಜಿಪಸ 2014, ಬೆಂಗಳೂರು, ದಿನಾಂಕ:06-12-2014.
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 75 ಜಿಪಸ 2016, ಬೆಂಗಳೂರು, ದಿನಾಂಕ:19-11-2016.
3. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 189 ಜಿಪಸ 2016, ಬೆಂಗಳೂರು, ದಿನಾಂಕ:25-11-2016.

ಪ್ರಸ್ತಾವನೆ:

ಮೇಲೆ ಓದಲಾದ(1) ಆದೇಶದಲ್ಲಿ 2014-15ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ರಾಜ್ಯದ ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಿಗೆ ಪ್ರಸ್ತುತ ನೀಡುತ್ತಿರುವ ಮಾಸಿಕ ಗೌರವಧನವನ್ನು ದಿನಾಂಕ:01-04-2014 ರಿಂದ ಅನ್ವಯಿಸುವಂತೆ ಇಮ್ಮಡಿಗೊಳಿಸಿದ್ದು, ಪರಿಷ್ಕೃತ ಗೌರವಧನ ಈ ಕೆಳಕಂಡಂತಿದೆ.

	ಗ್ರಾಮ ಪಂಚಾಯತಿ	ತಾಲ್ಲೂಕು ಪಂಚಾಯತಿ	ಜಿಲ್ಲಾ ಪಂಚಾಯತಿ
ಅಧ್ಯಕ್ಷರು	1000	4500	6000
ಉಪಾಧ್ಯಕ್ಷರು	600	3000	4500
ಸದಸ್ಯರು	500	1500	3000

ಮೇಲೆ ಓದಲಾದ (2)ರ ಆದೇಶದಲ್ಲಿ ಎಲ್ಲಾ ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರುಗಳಿಗೆ ಸಚಿವರ ಸ್ಥಾನಮಾನ ನೀಡಲಾಗಿದ್ದು, ಅವರ ವೇತನವನ್ನು ರೂ.35,000ಗಳಿಗೆ ಹೆಚ್ಚಿಸಲಾಗಿದೆ.

ಮೇಲೆ ಓದಲಾದ (3)ರ ಆದೇಶದಲ್ಲಿ ಎಲ್ಲಾ ಜಿಲ್ಲಾ ಪಂಚಾಯತ್‌ನ ಉಪಾಧ್ಯಕ್ಷರುಗಳ ಗೌರವಧನವನ್ನು ರೂ.15,000ಗಳಿಗೆ ಹೆಚ್ಚಿಸಲಾಗಿದೆ.

2017-18ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ರಾಜ್ಯದ ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಿಗೆ ಪ್ರಸ್ತುತ ನೀಡುತ್ತಿರುವ ಮಾಸಿಕ ಗೌರವಧನವನ್ನು ದಿನಾಂಕ:01-04-2017 ರಿಂದ ಅನ್ವಯಿಸುವಂತೆ ಹೆಚ್ಚಿಸಲು ಘೋಷಣೆ ಮಾಡಿದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 116 ಜಿಪಸ 2017, ಬೆಂಗಳೂರು. ದಿನಾಂಕ:03-05-2017.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, 2017-18ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿರುವಂತೆ ರಾಜ್ಯದ ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಿಗೆ ಪ್ರಸ್ತುತ ನೀಡುತ್ತಿರುವ ಮಾಸಿಕ ಗೌರವಧನವನ್ನು ದಿನಾಂಕ:01-04-2017 ರಿಂದ ಅನ್ವಯಿಸುವಂತೆ ಈ ಕೆಳಕಂಡಂತೆ ಪರಿಷ್ಕರಿಸಿ ಆದೇಶಿಸಿದೆ.

	ಗ್ರಾಮ ಪಂಚಾಯತಿ	ತಾಲ್ಲೂಕು ಪಂಚಾಯತಿ	ಜಿಲ್ಲಾ ಪಂಚಾಯತಿ
ಅಧ್ಯಕ್ಷರು	3000	6000	35000
ಉಪಾಧ್ಯಕ್ಷರು	2000	4000	15000
ಸದಸ್ಯರು	1000	3000	5000

ಮೇಲಿನ ವೆಚ್ಚವನ್ನು ಜಿಲ್ಲಾ ಪಂಚಾಯತ್‌ನ ಚುನಾಯಿತ ಪ್ರತಿನಿಧಿಗಳಿಗೆ ಗೌರವಧನವನ್ನು ಲೆಕ್ಕ ಶೀರ್ಷಿಕೆ:2515-00-101-0-35-324(2515-00-196-1-05-300), ತಾಲ್ಲೂಕು ಪಂಚಾಯತ್‌ಗೆ ಲೆಕ್ಕ ಶೀರ್ಷಿಕೆ: 2515-00-102-0-69-324(2515-00-197-1-10-300) ಹಾಗೂ ಗ್ರಾಮ ಪಂಚಾಯತ್‌ನ ಚುನಾಯಿತ ಪ್ರತಿನಿಧಿಗಳಿಗೆ ಲೆಕ್ಕ ಶೀರ್ಷಿಕೆ:2515-00-103-0-98-324(2515-00-198-1-11-300) ರಡಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಯಾಲಕ್ಕಿಗೌಡ) 3/5/17
ನಿರ್ದೇಶಕರು (ಪಂ.ರಾಜ್-2)ಹಾಗೂ
ಸರ್ಕಾರದ ಪದನಿಮಿತ್ತ ಜಂಟಿಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
3. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4. ಉಪ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು.
5. ಜಿಲ್ಲಾ ಖಜಾನಾಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲೆಗಳು.
6. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
7. ವಿಶೇಷಾಧಿಕಾರಿ, ಆರ್ಥಿಕ ಇಲಾಖೆ (ವೆಚ್ಚ-6), ವಿಧಾನ ಸೌಧ, ಬೆಂಗಳೂರು.
8. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
9. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು (ಆಯಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ).
10. ಗಣಕ ಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು.
11. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ ಮಾಸ ಪತ್ರಿಕೆ – ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು.
12. ಶಾಖಾ ರಕ್ಷಾ ಕಡತಕ್ಕೆ/ಹೆಚ್ಚುವರಿ ಪ್ರತಿ.

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.